(ಬಿಜೆಪಿ ಸದಸ್ಯರು ಬಾವಿಯಿಂದ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಎಲ್ಲೂ ಹೋಗುವುದಿಲ್ಲ. ನೀವು ನಿರೀಕ್ಷೆ ಮಾಡಿದ ಹಾಗೆ ನಾವು ನಿರೀಕ್ಷೆ ಮಾಡುವುದಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಇಲ್ಲ, ಇಲ್ಲ. ಇವರಿಗೆ ಅನುಮಾನ ಏನು ಅಂದರೆ ಇವರ ಕಡೆಯವರು ಹೋಗಿರುವವರು ವಾಪಸ್ಸೇ ಬರಲಿಲ್ಲ, ಅದರಿಂದ ಅವರ ಮೇಲೆ ಇವರಿಗೆ ಅನುಮಾನ. ನಿಮ್ಮ ಕಡೆ ಹೋದರಲ್ಲಾ, ಅವರು ವಾಪಸ್ ಬರಲಿಲ್ಲ. ಆದ್ದರಿಂದ ಇವರ ಮೇಲೆ ನಿಮಗೆ ಅನುಮಾನ.

(ಬಿಜೆಪಿ ಸದಸ್ಯರು ಬಾವಿಯಿಂದ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಸಿ. ಆರ್. ಸಗೀರ್ ಅಹಮದ್ : ನಿಮ್ಮ ಕಡೆಯವರೂ ಅದೇ ತರಹ ಹೊಡೆಸಿಕೊಂಡಿದ್ದಾರಲ್ಲಾ, ಮಾನ್ಯ ಗೃಹ ಮಂತ್ರಿಗಳು ನಿನ್ನೆ ಫೋಟೋ ತೋರಿಸಿದರಲ್ಲಾ. ಇನ್ನೂ 4–5 ಫೋಟೋಗಳು ಇವೆಯಂತೆ, ನಾಳೆ ನಾಡಿದ್ದು ಫೋಟೋ ತೋರಿಸುತ್ತಾರಂತೆ, ನೋಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ಅವರನ್ನು ಅರೆಸ್ಟ್ ಮಾಡಿ, ಕೇಸ್ ರಿಜಿಸ್ಟರ್ ಮಾಡಿ, ಅಂತಹ ದೊಡ್ಡ ಅಪರಾಧಿಯನ್ನು ಕ್ಯಾಬಿನೆಟ್‌ನಲ್ಲಿ ಇಟ್ಟುಕೊಂಡಿದ್ದಕ್ಕೋಸ್ಕರ ಜನರ ಕ್ಷಮೆ ಕೇಳಿ, ಅದನ್ನಾದರೂ ನೀವು ಮಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೆ, ಯಾರದ್ದಾದರೂ ಒಬ್ಬರದ್ದು ರೆಕಾರ್ಡ್‌ಗೆ ಹೋಗಲಿ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಪೂರ್ತಿ ಮಾತನಾಡಲಿ, ಆಮೇಲೆ ನೀವು ಮಾತನಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಸಿಂಧ್ಯಾ ಅವರು ಬಹಳ ಸೀರಿಯಸ್ ಸಬ್ಜೆಕ್ಟ್ ರೈಸ್ ಮಾಡಿದ್ದಾರೆ. ಈ ಸಭೆ, ಸದನ ನಡೆಯದೇ ಇರುವುದಕ್ಕೆ ಕಾರಣ ಸರ್ಕಾರ ಎಂದು ಹೇಳಿದ್ದಾರೆ. ನೀವು ನಿಲುವಳಿ ಸೂಚನೆ ತಂದರೆ ತಾವು ಕ್ವೊಶ್ಚನ್ ಅವರನ್ನು ಸಸ್ಪೆಂಡ್ ಮಾಡಿ ವಿಷಯ ತೆಗೆದುಕೊಳ್ಳುವುದಕ್ಕೆ ನಮ್ಮದೇನೂ ಬಾಧಕವಿಲ್ಲ ಎಂದು ಹೇಳಿದ ಸರ್ಕಾರ, ಈ ಸರ್ಕಾರ ಸದನ ನಡೆಯುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಮಾತನ್ನು ನಾನು ಅವರ ಬಾಯಿಂದ ನಿರೀಕ್ಷೆ ಮಾಡಿರಲಿಲ್ಲ. ಈಗಲೂ ಈ ಮೊಮೆಂಟ್‌ನಲ್ಲೂ ತಯಾರಿದ್ದೇವೆ. ಆದರೆ ನೀವು ಹೇಳಿದ ಹಾಗೆ ಎಲ್ಲಾ ಉತ್ತರವನ್ನೂ, ನಾವು ಹೇಳಿದ ಹಾಗೆಯೇ ಉತ್ತರ ಹೇಳಿ ಎಂದು ಸರ್ಕಾರಕ್ಕೆ ಹೇಳಬಹುದಾ? ತಾವು ನಮಗೆ ಹೇಳಬೇಕು. ಹೇಳುವುದಕ್ಕೆ ಸಾಧ್ಯವೇ ಇಲ್ಲ.

ಅಧ್ಯಕ್ಷರು : ನನಗೇ ಪವರ್ಸ್ ಇಲ್ಲ. ನಿಮಗೆ ಇಷ್ಟ ಬಂದ ಹಾಗೆ ಉತ್ತರ ಕೊಡಿಸಬೇಕು ಎಂದರೆ ಹಾಗೆ ಅವರನ್ನು ನಾನು ಮಾಡುವುದಕ್ಕೆ I have no powers.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸೋಮಶೇಖರ್ ಅವರು ಹೇಳಿದರು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಕಾನೂನು ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ಈ ಕಾನೂನಿನ ಬಗ್ಗೆ ನಾನು ತಿಳಿದಷ್ಟು ವಿಚಾರವನ್ನು ಹೇಳುತ್ತಿದ್ದೇನೆ. ಮಾನ್ಯ